ಅ) ಬೆಂಗಳೂರಿನ ಸ್ಥಳೀಯ ಕಛೇರಿಗಳಿಗೆ ಹಾಗೂ ಜಿಲ್ಲಾ ಕಛೇರಿಗಳಿಗೆ ಅವರ ಬೇಡಿಕೆಗಳ ಅನ್ವಯ ಈ ಕೆಳಗಿನಂತೆ ಹಂಚಲಾಗಿದೆ.

ಸ್ಥಳೀಯ ಕಛೇರಿಗಳು	
ಕ್ಯಾಲೆಂಡರ್	೧೪,೮೮೩
ಡೈರಿಗಳು	೨೪,೬೩೭
ಎಂಗೇಜ್‌ಮೆಂಟ್ ಡೈರಿಗಳು	೧,೭೨೨
ಜಿಲ್ಲಾ ಕಛೇರಿಗಳಿಗೆ	
ಕ್ಯಾಲೆಂಡರ್	೧೦,೫೯೫
ಡೈರಿಗಳು	೮,೯೪೭
ಎಂಗೇಜ್‌ಮೆಂಟ್ ಡೈರಿಗಳು	೪೭೪
ವಿಶೇಷ ಬೇಡಿಕೆಗಳಿಗೆ	
ಕ್ಯಾಲೆಂಡರ್	೧೫೫೬೨
ಡೈರಿಗಳು	೧೪,೯೦೦
ಎಂಗೇಜ್‌ಮೆಂಟ್ ಡೈರಿಗಳು	೧,೨೦೦

ಇ) ಗಮನಕ್ಕೆ ಬಂದಿದೆ. ಲೋಕಸಭೆ ಮತ್ತು ವಿಧಾನ ಸಭಾ ಹಾಗೂ ಮಹಾನಗರ ಪಾಲಿಕೆಗಳು ಮತ್ತು ಪುರಸಭೆಗಳ ಚುನಾವಣಾ ಮತ ಪತ್ರಗಳ ಮುದ್ರಣ ಒದಗಿ ಬಂದ ಕಾರಣ ೧೯೯೦ನೇ ಇಸವಿಯ ಕ್ಯಾಲೆಂಡರ್ ಡೈರಿಗಳು, ಎಂಗೇಜ್‌ಮೆಂಟ್ ಡೈರಿಗಳ ಮುದ್ರಣ ಪೂರೈಕೆಯಲ್ಲಿ ಅನಿವಾರ್ಯವಾಗಿ ವಿಳಂಬವಾಗಿರುತ್ತದೆ.

ಈ) ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಸಂಪಾವಸಂತ.— ಸನ್ಮಾನ್ಯ ಅಧ್ಯಕ್ಷರೆ, ಈ ಮುದ್ರಣಕ್ಕಾಗಿ ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್.— ಆ ವಿವರ ನನ್ನಲ್ಲಿ ಇಲ್ಲ, ನೋಟೀಸ್ ಬೇಕಾಗುತ್ತದೆ.

ಶ್ರೀಮತಿ ಸುಮಾವಸಂತ.—ಅನಿವಾರ್ಯವಾಗಿ ವಿಳಂಬವಾಗಿದೆ ಎಂದು ಹೇಳಿದ್ದೀರಿ. ಈಗಾಗಲೇ ಮೂರು ತಿಂಗಳು ಕಳೆದು ಹೋಗಿದೆ. ವಿಳಂಬವಾಗುವುದಕ್ಕೆ ಲೇಬರ್ ಸಮಸ್ಯೆಯೇ, ಪೇಪರ್ ಸಮಸ್ಯೆಯೆ ? ಇದರ ಬಗ್ಗೆ ತನಿಖೆ ಮಾಡಿಸಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಜಾಗ್ರತೆ ವಿತರಣೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳುವಂಥ ದೋಷ ಇದ್ದರೆ, ತನಿಖೆ ಕೂಡ ಮಾಡಿಸುತ್ತೇನೆ.

ಅಧ್ಯಕ್ಷರು.— ಮಾರ್ಚ್ ತಿಂಗಳು ಕೊನೆಯಾಗುತ್ತಾ ಬಂದರೂ ವಿತರಣೆ ಮಾಡಿಲ್ಲವೆ ?

ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳ ಸೃಷ್ಟಿ

೭೯. ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ (ಮಾಯಕೊಂಡ).—ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ನಿಗಧಿಪಡಿಸಿರುವ ವಿದ್ಯಾರ್ಥಿಗಳ—ಅಧ್ಯಾಪಕರ ಅನುಪಾತ.

ಆ) ಈ ಅನುಪಾತದ ಪ್ರಕಾರ ಸೃಜಿಸಲಾಗಿರುವ ಹುದ್ದೆಗಳು.

ಇ) ನೈಜವಾಗಿ ಸೃಜಿಸಲಾದ ಹುದ್ದೆಗಳ ಸಂಖ್ಯೆ ಮತ್ತು ಈ ಹಿಂದೆ ಯಾವಾಗ ಹುದ್ದೆಗಳನ್ನು ಸೃಜಿಸಲಾಗಿತ್ತು ?

ಈ) ವಿದ್ಯಾರ್ಥಿಗಳ-ಅಧ್ಯಾಪಕರ ಅನುಪಾತದನ್ವಯ ಇರಬಹುದಾದ ಕೊರತೆಯನ್ನು ನೀಗಿಸಲಂ ಕೈಗೊಂಡ ಕ್ರಮ.

ಶ್ರೀ ಕೆ.ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) ೫೦ ಮಕ್ಕಳಿಗೆ ಒಬ್ಬ ಶಿಕ್ಷಕರ ಅನುಪಾತ ನಿಗಧಿಪಡಿಸಿದೆ.

ಆ) ೫೦:೧ ಅನುಪಾತದಂತೆ ೧,೩೫,೩೦೦.

ಇ) ೧,೨೪,೦೦೦. ೧೯೮೫.

ಈ) ಕೊರತೆಯಾಗಿರುವ ಶಿಕ್ಷಕರ ಹುದ್ದೆಗಳನ್ನು ಸೃಜನೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಂತ್ರಿಗಳು ಕೊಟ್ಟಿರತಕ್ಕ ಉತ್ತರದ ಪ್ರಕಾರ, ಸರ್ಕಾರ ಗೊತ್ತು ಮಾಡಿದಂಥ ದಾಮಾಶ ಪ್ರಕಾರ ೧೧ ೦೦೦ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆಯೆಂದು ತಿಳಿಸಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇದ್ದರೆ ಪ್ರಾಥಮಿಕ ಶಿಕ್ಷಣ ಎಷ್ಟರ ಮಟ್ಟಿಗೆ ಅರ್ಥಪೂರ್ಣ ಎನ್ನುವುದನ್ನು ಮನಗಾಣಬೇಕಾಗಿದೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ತುಂಡೆತಾಯಿಗಳು ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿಕೊಡುವುದಕ್ಕೆ ತಯಾರಿದ್ದಾರೆ. ಮಕ್ಕಳು ಶಾಲೆಗೆ ಬರುವುದಕ್ಕೆ ತಯಾರಿವೆ. ಆದರೆ, ಉಪಾಧ್ಯಾಯರುಗಳು ಇಲ್ಲದೇ ಶಾಲೆಗಳು ಹೇಗೆ ನಡೆಯುವುದಕ್ಕೆ ಸಾಧ್ಯ? ಯಾವಾಗ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುತ್ತೀರಿ ?

ಶ್ರೀ ಕೆ ಹೆಚ್. ರಂಗನಾಥ್.—ಸ್ವಾಮಿ, ಈಗಾಗಲೇ ಕೆಲವು ಹುದ್ದೆಗಳನ್ನು ಕಪ್ಪುಹಲಗೆಯ ಕಾರ್ಯಕ್ರಮದಡಿಯಲ್ಲಿ ಭರ್ತಿ ಮಾಡಲಾಗಿದೆ. ಸುಮಾರು ೧೨,೦೦೦ ಹುದ್ದೆಗಳನ್ನು ಇನ್ನೂ ಭರ್ತಿ ಮಾಡಬೇಕಾಗಿದೆ. ನೇಮಕ ಮಾಡುವ ವಿಚಾರ ಸರ್ಕಾರದ ಮುಂದಿದೆ.

೧೧-೩೦ ಎ.ಎಂ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈಗ ಖಾಲಿ ಇರತಕ್ಕ ಹುದ್ದೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಇವೆ. ಅದರಲ್ಲಿಯೂ ಏಕೋಪಾಧ್ಯಾಯರ ಶಾಲೆಗಳಲ್ಲಿ ಇರುವ ಉಪಾಧ್ಯಾಯನು ರಜಾ ಹಾಕಿ ೧೫ ದಿವಸ ಹೋದರೆ, ಸಂಪೂರ್ಣವಾಗಿ ಶಾಲೆಯನ್ನು ಮುಚ್ಚಬೇಕಾಗುತ್ತದೆ. ಮುಂದಿನ ವರ್ಷ ಶಾಲೆಗಳು ಪ್ರಾರಂಭವಾಗುವುದಕ್ಕೆ ಮೊದಲು ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ ಹೆಚ್. ರಂಗನಾಥ್.—೧೯೮೬-೮೭ ಹಾಗೂ ೮೭-೮೯ನೇ ಸಾಲಿನಲ್ಲಿ ಕಪ್ಪು ಹಲಗೆಯ ಯೋಜನೆ ಮೇರೆಗೆ ೬೬೧೪ ಹುದ್ದೆಗಳನ್ನು ಏಕೋಪಾಧ್ಯಾಯರ ಶಾಲೆಗೆ ಮಂಜೂರು ಮಾಡಲಾಗಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ ಇನ್ನೂ ೧೨,೦೦೦ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಹೆಚ್ಚು ಕಡಿಮೆ ಮುಂದಿನ ವರ್ಷ ಶಾಲೆ ಪ್ರಾರಂಭವಾಗುವ ಮುನ್ನವೇ ನೇಮಕ ಮಾಡಿಮುಗಿಸುವ ಇಚ್ಛೆ ಸರ್ಕಾರಕ್ಕೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ರಾಜ್ಯದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಬಗ್ಗೆ ಅಸಂಖ್ಯಾತ ಅಂಕಿಸಂಖ್ಯೆಗಳನ್ನು ಸದನದ ಮುಂದೆ ಇಟ್ಟಿದ್ದಾರೆ. ಈಗಾಗಲೇ ಜಿಲ್ಲಾಪರಿಷತ್‌ನವರು ನಿರುದ್ಯೋಗ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಉಪಾಧ್ಯಾಯರ ಶಿಕ್ಷಣದ ಒಂದು ಅರ್ಹತೆ ಏನಿದೆ, ಅದರ ಆಧಾರದ ಮೇಲೆ ತಾತ್ಕಾಲಿಕವಾಗಿ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡಿದ್ದಾರೆ. ಬಹುತೇಕ ಪ್ರಾಥಮಿಕ ಶಾಲೆಗಳಲ್ಲಿ ಈ ರೀತಿ ನೇಮಕಗೊಂಡು ಕೆಲಸ ಮಾಡುತ್ತಿರುವವರಿಗೆ ಗೌರವ ಶಿಕ್ಷಕರೆಂದು ಹೆಸರು ಕೊಟ್ಟಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ಈಗ ಅವರನ್ನೇ ಏತಕ್ಕೆ ಖಾಯಂ ಗೊಳಿಸಬಾರದು, ಇವರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಗೌರವಾನ್ವಿತ ಶಿಕ್ಷಕರ ಬಗ್ಗೆ ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅವರ ಬಗ್ಗೆ ಹೇಳಬೇಕೆಂದರೆ, ಅವರದು ಕ್ರಮವಾದ ನೇಮಕ ಆಗಿಲ್ಲ. ತಮಗೆ

ತಿಳಿದ ಹಾಗೆ ಅದು ಸರಿಯಿಲ್ಲ ಎಂದು ಹೇಳಿ ಸರ್ಕಾರ ತೀರ್ಮಾನಕ್ಕೆ ಬಂದಿದ್ದು ಆಗಿದೆ. ಆ ತೀರ್ಮಾನಕ್ಕೆ ಸರ್ಕಾರ ಬಂದಿದ್ದರೂ ಸಹಾ ಅವರನ್ನು ಕೆಲಸದಿಂದ ಹೊರಕ್ಕೆ ಕಳುಹಿಸಿಲ್ಲ. ಅವರನ್ನು ೩೮೦ ರೂಪಾಯಿಗಳ ಸಂಬಳದ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದಾರೆ, ಈ ಬಗ್ಗೆ ಒಂದು ಪದ ಹೇಳಬೇಕೆಂದರೆ ಇದು ಎಕ್ಸ್‌ಪ್ಲಾಯ್‌ಟೇಷನ್ ಎಂದು ಹೇಳಬೇಕಾಗುತ್ತದೆ. ಇದು ಸರಿಯಲ್ಲ. ಸರ್ಕಾರದ ನೀತಿ ಅಂದರೆ ಸರಿಯಾಗಿ ಸಕ್ರಮವಾದ ರೀತಿಯಲ್ಲಿ ನೇಮಕ ಮಾಡಿಕೊಳ್ಳಬೇಕು, ಈಗ ೧೨ ಸಾವಿರ ಜನರಿಗೆ ನಾವು ಏನು ಆರ್ಜಿಗಳನ್ನು ಕರೆಯುತ್ತೀವೆ ಅದಕ್ಕೆ ಈ ಉಪಾಧ್ಯಾಯರು ಏನಿದ್ದಾರೆ ಇವರೂ ಅರ್ಜಿ ಹಾಕಬೇಕಾಗುತ್ತದೆ. ಇವರಿಗೂ ಸಹ ಅರ್ಜಿ ಹಾಕಿಕೊಳ್ಳಕ್ಕೆ ಅವಕಾಶ ಕೊಡುತ್ತೇವೆ. ಇವರಿಗೂ ನೇಮಕ ಆಗತಕ್ಕ ಅವಕಾಶ ಸರ್ಕಾರ ಮಾಡುತ್ತದೆ.

ಶ್ರೀ ಹೆಚ್.ಎಸ್. ಕೌಜಲಗಿ.—ಮಾನ್ಯ ಮಂತ್ರಿಗಳು ೧೯೮೯-೯೦ನೇ ಇಸವಿಯಲ್ಲಿ ಈ ಪೋಸ್ಟ್ ಕ್ರಿಯೇಟ್ ಆಗಿದೆ ಎಂದು ಹೇಳಿದರು. ೧೯೮೯-೯೦ನೇ ಇಸವಿಯಲ್ಲಿ ಇದೇ ಸದನದಲ್ಲಿ ಆದಷ್ಟು ಬೇಗನೆ ಈ ಹುದ್ದೆಗಳನ್ನು ತುಂಬಲಾಗುವುದು ಎಂದು ಹೇಳಿದರು. ಆದ್ದರಿಂದ, ನಿರ್ದಿಷ್ಟವಾಗಿ ಎಷ್ಟು ದಿವಸ ಗಳಲ್ಲಿ ಈ ಹುದ್ದೆಗಳನ್ನು ತುಂಬಲಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಈಗ ಬೆಳಗಾಂ ಜಿಲ್ಲೆಯಲ್ಲಿಯೇ ಸುಮಾರು ೮೦೦ ಪೋಸ್ಟ್ ವೇಕೆಂಟ್ ಇದೆ. ಆದ್ದರಿಂದ, ಎಷ್ಟು ದಿವಸದಲ್ಲಿ ಈ ಹುದ್ದೆಗಳನ್ನು ತುಂಬುತ್ತೀರಿ ಎನ್ನುವ ಬಗ್ಗೆ ನಿರ್ದಿಷ್ಟ ದಿನಾಂಕವನ್ನು ತಿಳಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷರೆ, ನಾನು ಈಗಾಗಲೇ ಇವರ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದ್ದೇನೆ. ಕಪ್ಪು ಹಲಗೆಯ ಯೋಜನೆಯ ಅಡಿಯಲ್ಲಿ ನೇಮಕ ಆಗಿದೆ. ಇನ್ನು ೧೨ ಸಾವಿರ ಜನರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಅವನ್ನು ಮುಂದಿನ ವರ್ಷ ಶಾಲೆ ಪ್ರಾರಂಭವಾಗುವುದರೊಳಗೆ ಸ್ವಲ್ಪ ಹೆಚ್ಚು ಕಡಿಮೆ ಎಂದು ಹೇಳಿದ್ದೇನೆ. ನಿಗದಿತ ತಾರೀಖು ಹೇಳಿ ಅಂದರೆ ಕಷ್ಟವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ಜಿಲ್ಲಾಪರಿಷತ್‌ನವರು ಮಾಡುತ್ತಾರೋ ಅಥವಾ ಸರ್ಕಾರ ಮಾಡುತ್ತದೆಯೋ.

ಶ್ರೀ ಕೆ.ಹೆಚ್. ರಂಗನಾಥ್.—ಅದರ ಬಗ್ಗೆ ಕಾನೂನು ಹೇಗೆ ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಎಂ.ಎಸ್ ಆತ್ಮಾನಂದ.—ಜಿಲ್ಲಾ ಆಯ್ಕೆ ಸಮಿತಿ ಆಯ್ಕೆ ಮಾಡುವಾಗ ಆಯಾ ಜಿಲ್ಲೆಯವರಿಗೆ ಆದ್ಯತೆ ಕೊಡುವ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆಯೇ ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಸರ್ಕಾರದ ವಿಚಾರದಲ್ಲಿ ಅದು ಇದೆ. ಸಾರ್ವಜನಿಕರನ್ನು ಆ ಸಮಿತಿಯಲ್ಲಿ ಸೇರಿಸಬೇಕೆಂದು ಉದ್ದೇಶ ಇದೆ. ಮೂರು ಜನರು ಇರತಕ್ಕ ಕಮಿಟಿ ಏನಿದೆ ಅದರಲ್ಲಿ ಸಾರ್ವಜನಿಕರ ಪ್ರತಿನಿಧಿಗಳು ಇರಬೇಕೆಂದು ಇದೆ, ವೀಕರ್ ಸೆಕ್ಷನ್ ಏನು ಇದ್ದಾರೆ ಅವರನ್ನು ಅದರಲ್ಲಿ ಸೇರಿಸಬೇಕೆಂದು ಒಂದು ವಿಚಾರ ಇದೆ. ಇವೆಲ್ಲಾ ಪರಿಶೀಲನೆ ಮಾಡುತ್ತಿದ್ದೇವೆ, ಆ ಜಿಲ್ಲೆಯ ಅಭ್ಯರ್ಥಿಗಳಿಗೆ ಆದಷ್ಟು ಹೆಚ್ಚು ಆದ್ಯತೆ ಕೊಡಬೇಕೆನ್ನುವ ವಿಚಾರ ಇದೆ. ಅದೇನಾದರೂ ರಾಜ್ಯಾಂಗಕ್ಕೆ ಅಡ್ಡಿಯಾಗುತ್ತದೆಯೇ, ಅದನ್ನು ಕಾನೂನು ಕೆಳಗಡೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ. ಸಿದ್ದಯ್ಯ.—ಸ್ಥಳೀಯ ಅಭ್ಯರ್ಥಿಗಳಿಗೆ ಏಜ್ ಬಾರ್ ಆಗಿದ್ದರೂ ಸಹಾ ಅವರಿಗೆ ರೆಕ್ರೂಟ್‌ಮೆಂಟ್ ಮಾಡಿಕೊಳ್ಳತಕ್ಕ ಸಾಧ್ಯತೆ ಇದೆಯೇ ? ಈಗ ಏನೂ ಇಲ್ಲದೇ ಇರತಕ್ಕ ಹಿಂದುಳಿದ ವರ್ಗ, ಹಾಗೂ ಹರಿಜನ ಗಿರಿಜನರಿಗೆ ಏಜ್‌ಬಾರ್ ಆಗಿದ್ದರೆ ಅಂತಹವರ ಬಗ್ಗೆ ಸರ್ಕಾರ ಏನು ಮಾಡುತ್ತೀರಿ ?

ಶ್ರೀ ಕೆ.ಹೆಚ್. ರಂಗನಾಥ್.—ಆ ಸಮಸ್ಯೆಯೂ ಕೂಡ ಸರ್ಕಾರದ ಮುಂದೆ ಇದೆ. ಇಪ್ಪತ್ತು ಏಜ್‌ಬಾರ್‌ಗೆ ಕಾರಣ ಐದಾರು ವರ್ಷಗಳಿಂದ ನೇಮಕ ನಡೆಯದೇ ಇರುವುದು ಆಗಿದೆ. ಟಿ.ಸಿ.ಹೆಚ್. ಪರೀಕ್ಷೆ ಪಾಸ್ ಮಾಡಿರತಕ್ಕ ಉಪಾಧ್ಯಾಯರು ಏನಿದ್ದಾರೆ ಅವರ ವಯೋಮಿತಿ ಜಾಸ್ತಿಯಾಗುತ್ತಿದೆ, ಅದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆಂದು ಸರ್ಕಾರದ ಇಚ್ಛೆ.

ಶ್ರೀ ಕೆ. ಎಚ್. ಹನುಮೇಗೌಡ,—ಉಪಾಧ್ಯಾಯರು ಶಾಲೆಗಳಿಗೆ ಹೋಗುತ್ತಾರೆ. ಆದರೆ ಅಲ್ಲಿರುವ ಮಕ್ಕಳಿಗೆ ಓದುವುದಕ್ಕೆ ಬರುವುದಿಲ್ಲ ಬರೆಯುವುದಕ್ಕೆ ಬರುವುದಿಲ್ಲ ಇಂತಹ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತೇವೆ ಆದರೆ ಅಲ್ಲಿರುವ ಮಕ್ಕಳಿಗೆ ಓದುವುದಕ್ಕೆ ಬರುವುದಿಲ್ಲ, ಕಡೆಗೆ ಪಾಸ್ಸಿಗ್ ಕೂಡ ಬರುವುದಿಲ್ಲ. ಇದರ ಬಗ್ಗೆ ಮಾಸ್ಟರ್

ಅನ್ನು ಕೇಳಿದರೆ ಅವರು ಮಾತನಾಡುವುದೇ ಇಲ್ಲ. ಮಕ್ಕಳಿಗೆ ಏಕೆ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲವೆಂದು ಕೇಳಿದರೆ ಅವರು ಮಾತನಾಡುವುದೇ ಇಲ್ಲ. ಇಂತಹ ನಿದರ್ಶನಗಳು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ.ಪುತ್ತಾಪಚಂದ್ರಶೆಟ್ಟಿ.—ಮೂಕರು, ಕಿವುಡರು ಏನಾದರೂ ಆಪಾಯಿಂಟ್ ಆಗಿದ್ದಾರೆಯೇ?

ಶ್ರೀ ಕೆ. ಹೆಚ್. ರಂಗನಾಥ್.—ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಪ್ಪು ಹಲಗೆ ಯೋಜನೆಯನ್ನು ಜಾರಿಗೆ ತಂದಿದ್ದೀರಿ ಅದು ಸಂತೋಷದ ವಿಚಾರ. ನಮ್ಮ ಕ್ಷೇತ್ರದಲ್ಲಿ 50 ಕಪ್ಪು ಹಲಗೆ ಶಾಲೆಗಳನ್ನು ನೋಡಿದೆ ಅವೆಲ್ಲಾ ಬಿಳಿ ಹಲಗೆಯಾಗಿವೆ, ಅಲ್ಲಿ ಸೋರುತ್ತಾ ಇರತಕ್ಕಂತಹ ಶಾಲೆಗಳು ಶಾಲಾಕಟ್ಟಡದ ಕಿಟಕಿಗಳೆಲ್ಲಾ ಕಿತ್ತು ಕೊಂಡು ಹೋಗಿವೆ. ಸರಿಯಾದ ಕೊಠಡಿ ಅಲ್ಲಿ ಇಲ್ಲ, ಇದು ಸೋರುವ ಬಿಳಿ ಹಲಗೆ ಶಾಲೆಗಳೇ ಅಥವಾ ಕಪ್ಪು ಹಲಗೆ ಶಾಲೆಗಳೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಜಿಲ್ಲಾ ಪರಿಷತ್ತಿನ ವತಿಯಿಂದ ಗೌರವ ಶಿಕ್ಷಕರಾಗಿ ಏನು ನೇಮಕವಾಗಿದ್ದಾರೆ ಅವರು ಅರ್ಜಿ ಹಾಕಿಕೊಂಡರೆ ಅವರಿಗೆ ಎಲ್ಲರಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಹಾಗೆ ಕೊಡುವುದಕ್ಕಾಗುವುದಿಲ್ಲ. ಅವರ ವಯೋಮಿತಿ ಬಗ್ಗೆ ವಿಚಾರ ಮಾಡಿದ್ದೇವೆ. ಒಂದು ಸ್ಥಾನಕ್ಕೆ ೫ ಜನರಿಗೆ ಸಂದರ್ಶನಗಳನ್ನು ಕರೆಯತಕ್ಕಂತಹ ವ್ಯವಸ್ಥೆ ಈಗ ಇದೆ. ಇನ್ನು ಮುಂದೆ ಹತ್ತು ಜನರನ್ನು ಕರೆಯಬೇಕೆಂಬುದರ ಬಗ್ಗೆ ವಿಚಾರ ಮಾಡ ಬೇಕೆಂದಿದ್ದೇವೆ. ಹಾಗೆ ಮಾಡಿದರೆ ಎಲ್ಲರಿಗೂ ಇಂಟರವ್ಯೂ ದೊರೆಯತಕ್ಕಂತಹ ಅವಕಾಶ ಇದೆ. ಈ ಉದ್ದೇಶ ನಮಗೆ ಇದೆಯೇ ಏನಹ ತಾವು ಹೇಳಿದ ಹಾಗೆ ಕೊಟ್ಟರೆ ಮಾನ್ಯ ಹನುಮೇಗೌಡರವರು ಹೇಳಿದ ಪರಿಸ್ಥಿತಿ ಉದ್ಭವವಾಗಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಹನುಮೇಗೌಡ ಅವರು ಹೇಳಿದ್ದುದು ಕಣ್ಣು ಕಾಣದೇ ಇರತಕ್ಕಂತಹ, ಕಿವಿ ಕೇಳದೇ ಇರತಕ್ಕಂತಹ ಶಿಕ್ಷಕರ ಬಗ್ಗೆ ನಾನು ಹೇಳುತ್ತಿರುವುದು ಜಿಲ್ಲಾ ಪರಿಷತ್ತಿನವರು ಕಣ್ಣು ಕೇಳತಕ್ಕಂತಹ ಕಿವಿ ಕೇಳತಕ್ಕಂತಹವರನ್ನು ಏನು ನೇಮಕಾತಿ ಮಾಡಿದ್ದಾರೆ ಇಂತಹವರನ್ನು ಬೀದಿಗೆ ಕಳಿಸಬಾರದೆಂದು ಈ ಸಭೆಯಲ್ಲಿ ಸರಕಾರಕ್ಕೆ ಅನೇಕ ಸಾರಿ ಈ ಬೇಡಿಕೆಗಳನ್ನು ಮಂಡಿಸಿದ್ದೇವೆ. ಶಿಕ್ಷಕರ ನೇಮಕಾತಿಯನ್ನು ಮುಂದೆ ಮಾಡುವಾಗ ಈಗ ಏನು ಗೌರವ ಶಿಕ್ಷಕರೆಂದು ನೇಮಕಾತಿ ಮಾತಿದ್ದೀರಿ ಇವರಿಗೆ ಅರ್ಹತೆ ಆಧಾರದ ಮೇಲೆ ಹೆಚ್ಚಿನ ಪ್ರಾಶಸ್ತ್ಯವನ್ನು ತಾವು ಕೊಡಬೇಕು. ಅದನ್ನು ತಾವು ಕೊಡುತ್ತೀರಾ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಹಾಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬನ್ನಿಕೋಡ್ ಬಸಪ್ಪ.—ಈಗ ತಾನೆ ಜಿಲ್ಲಾ ಪರಿಷತ್ತಿನ ವತಿಯಿಂದ ಆಯ್ಕೆಯಾದಂತಹ ಹಿಂದಿ ಟೀಚರ್ಸ್ ಅನ್ನು ನೇಮಕಾತಿ ಮಾಡಿಕೊಂಡಿದ್ದಾರೆ. ಧಾರವಾಡ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಕಡೆಗಳಲ್ಲಿ ಹಿಂದಿ ಟಿ.ಸಿ.ಹೆಚ್. ಆಗದೇ ಇರುವವರನ್ನು ನೇಮಕ ಮಾಡಿಕೊಂಡಿದ್ದಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಹಿಂದಿ ಟಿ.ಸಿ.ಹೆಚ್. ಆದವರನ್ನು ಮಾತ್ರ ನೇಮಿಸಿಕೊಳ್ಳುತ್ತೇವೆಂದು ಹೇಳಿ ಅವರಿಗೆ ಸಂದರ್ಶನಕ್ಕೂ ಕೂಡ ಅವಕಾಶ ಮಾಡಿಕೊಟ್ಟಿಲ್ಲ. ಖಾಲಿ ಹುದ್ದೆಗಳು ಇದ್ದರೂ ಕೂಡ ಅಲ್ಲಿಗೆ ನೇಮಕಾತಿ ಮಾಡಿಕೊಂಡಿಲ್ಲ. ಇಡೀ ರಾಜ್ಯದಲ್ಲಿ ಹಿಂದಿ ಟಿ.ಸಿ.ಹೆಚ್. ಕಲಿಯಲಿಕ್ಕೆ ಯಾವುದೇ ಅವಕಾಶ ಇಲ್ಲ. ಯಾವ ಹಿಂದಿ ಟಿ.ಸಿ.ಹೆಚ್ ಶಾಲೆಗಳು ಇಲ್ಲ. ಧಾರವಾಡ ಜಿಲ್ಲೆಯ ಮಟ್ಟಿಗೆ ಮಾತ್ರ ಹಿಂದಿ ಟಿ.ಸಿ.ಹೆಚ್. ಆಗಬೇಕೆಂದು ಹೇಳುವುದು ಸರಿಯಲ್ಲ ಅವರಿಗೆ ಸಂದರ್ಶನಕ್ಕೆ ಕಳಿಸಿಲ್ಲ ಅವರನ್ನು ಆಯ್ಕೆ ಕೂಡ ಮಾಡಿಕೊಂಡಿಲ್ಲ ಇದರ ಬಗ್ಗೆ ತಾವು ಏನಾದರೂ ಆದೇಶ ಕೊಡುತ್ತೀರಾ ? ಹಿಂದಿ ಟಿ. ಸಿ. ಹೆಚ್. ಆಗದೇ ಇರುವವರನ್ನು ಧಾರವಾಡ ಜಿಲ್ಲೆಯ ಶಿಕ್ಷಕರನ್ನಾಗಿ ನೇಮಕ ಮಾಡುತ್ತೀರಾ ?

ಶ್ರೀ ಕೆ. ಹೆಚ್, ರಂಗನಾಥ್.—ನನಗೆ ಈ ವಿಷಯ ಗೊತ್ತಿಲ್ಲ. ಮಾನ್ಯ ಸದಸ್ಯರು ಇದರ ಬಗ್ಗೆ ಪತ್ರ ಬರೆದರೆ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.